೧೨-೦೦ ಪಿ.ಎಂ.

ಪ್ರಕಟಣೆ

ಸದಸ್ಯರು ಗೈರು ಹಾಜರಿ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಸಾಲೇರ್ ಎಸ್. ಸಿದ್ದಪ್ಪನವರು ತಮ್ಮ ಅನಾರೋಗ್ಯದ ಕಾರಣವಾಗಿ ವಿಧಾನ ಸಭಾ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

"ಶ್ರೀ ಸಾಲೇರ್ ಎಸ್. ಸಿದ್ದಪ್ಪನವರಿಗೆ ವಿಧಾನ ಸಭೆಯ ಪ್ರಸ್ತುತ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ" ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಸಾಲೇರ್ ಎಸ್. ಸಿದ್ದಪ್ಪನವರಿಗೆ ಅನುಮತಿ ನೀಡಲಾಗಿದೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಲೋಕಾಯುಕ್ತದ ನಡವಳಿಕೆಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದರ ಬಗ್ಗೆ ಮತ್ತು ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ಹರಿಜನರ ಗುಡಿಸಲುಗಳನ್ನು ಭಸ್ಮ ಮಾಡಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು.—ನಾನು ಹೇಳುತ್ತೇನೆ, ದಯವಮಾಡಿ ಮಾನ್ಯ ಸದಸ್ಯರು ಸ್ವಲ್ಪ ಕುಳಿತುಕೊಳ್ಳಬೇಕು.

"ಕರ್ನಾಟಕ ರಾಜ್ಯದ ಲೋಕಾಯುಕ್ತರು ಇತ್ತೀಚೆಗೆ ಲೋಕಾಯುಕ್ತದ ನಿಯಮಂ ೧೬ಕ್ಕೆ ವಿರುದ್ಧವಾಗಿ ಕೆಲವು ಪತ್ರಿಕೆಗಳಿಗೆ ಲೋಕಾಯುಕ್ತದ ನಡವಳಿಕೆಗಳನ್ನು ಬಿಡುಗಡೆ ಮಾಡಿ ಲೋಪಪಡೆಸಿರುವ ಲೋಕಾಯುಕ್ತರ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಲು"

ಅವಕಾಶಕೊಡಬೇಕು ಎನ್ನುವ ಬಗ್ಗೆ ನೋಟೀಸ್ ಕೊಟ್ಟಿದ್ದೀರಿ, ಅದು ಈ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ. ಇದರ ಬಗ್ಗೆ ನಾನು ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಾನು ಕೊಟ್ಟಿರತಕ್ಕ ಸಬ್ಜೆಕ್ಟ್ ಬೇರೆ ಇದೆ, ಇದಂ ಸಂಬಂಧ ಅಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ. ಲೋಕಾಯುಕ್ತ ವಿಚಾರದಲ್ಲಿ...

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು, ನಾನು ವಿಚಾರ ಏನು ಎನ್ನುವುದನ್ನು ಹೇಳುತ್ತೇನೆ.

"ಚಿತ್ರದುರ್ಗ ಜಿಲ್ಲೆಯ ತುರುವನೂರಿನಲ್ಲಿ ನೂರಾರು ಹರಿಜನರ ಗುಡಿಸಲುಗಳನ್ನು ವೇಲ್ಫಾತಿಯವರು, ಭೂಮಾಲೀಕರು ಕೆಲವು ದಿನಗಳ ಹಿಂದೆ ಸುಟ್ಟು ಹಾಕಿ ಅನೇಕರನ್ನು ಗಾಯಗೊಳಿಸಿರುವುದರಿಂದ ಉದ್ಭವವಾಗಿರುವ ಗಂಭೀರ ಪರಿಸ್ಥಿತಿಯನ್ನು ವಂತ್ತು ಹರಿಜನ ಗಿರಿಜನರಿಗೆ, ದುರ್ಬಲವರ್ಗದವರಿಗೆ, ಸರ್ಕಾರ ತೋರುತ್ತಿರುವ ವೈಫಲ್ಯತೆಯನ್ನು ಚರ್ಚಿಸಲು ಈ ಸಭೆಯನ್ನು ಮುಂದೂಡಬೇಕೆಂದು ವಿನಂತಿಸುತ್ತೇನೆ."

ಎಂದು ಹೇಳಿದ್ದೀರಿ. ಆದ್ದರಿಂದ, ನಿಮ್ಮದು ಕೂಡ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆಯೂ ಸಹ ನಾನು ಅನುಮತಿಯನ್ನು ನಿರಾಕರಣೆ ಮಾಡಿರುತ್ತೇನೆ.